ಬಾಟ್ಲನಾಗೆ ನೀರು ಒದಗಿಸಿದಂಗಲ್ರಯ್ಯೋ. ದನ ಒಂದಕ್ಕೆ ಎಷ್ಟು ಲೀಟರ್ ನೀರು ಬೇಕಾಗ್ತದೆ ದಿನಕ್ಕೆ ಅಂಬೋ ತಿಳಿವಳ್ಕೆ ಐತೇನ್ ನಿಮ್ಗೆ? ನಿಮ್ಮ ಘನಂದಾರಿ ಕೆಲಸದಿಂದ ನಮ್ಮೋರು ದನಕಾಯೋ ಹಂಗಾತು' ಎಂದು ಎಸ್.ಐ. ಸಿಡಿಮಿಡಿಕೊಂಡ. 'ಗೋವಿನ ಕತೆ ಕೇಳಿದಿರಿಲ್ಲ್ಲೋ... ಗೋವು ಅಂದ್ರ ಪವಿತ್ರ ಪ್ರಾಣಿ ಗೊತ್ತದೇನ್ರಿ?' ಎಂದು ಸೇನಾ ಮುಖಂಡ ಒದರಿದ. 'ಅಯ್ಯೋ ಹೋಗಪ್ಪಾ, ನಿನಗೆ ಪವಿತ್ರ ಪ್ರಾಣಿ ಇದ್ದೀತು. ನಮಗದು ಕೇವಲ ದನ ಅಷ್ಟೆ. ಸುಮ್ಮನೆ ಮಾತಾಡೋ ಬದ್ಲು ಒಂದು ಹೊರೆ ಹುಲ್ಲು ತಂದು ಹಾಕು. ದಿನಾ ಎಂಟು ಹೊರೆ ಬೇಕಾಗ್ತದೆ. ಖರ್ಚು ಸಾವಿರದ ಮೇಲಾಗ್ತದೆ. ಗೊತ್ತದೇನು?' ಎಂದವರ ಬಾಯಿಮುಚ್ಚಿಸಿ ದಬಾಯಿಸಿ ಗದುಮಿದ. ಎಲ್ಲಾದರೂ ದನ ಒಂದು 'ಗೊಟಕ್' ಎಂದರೆ ಎಂಬ ಎದೆ ಉರಿ ರಪ್ಪನೆ ಹೆಚ್ಚಾಗಿ ರೆಂಟಾಕ್ ಮಾತ್ರ ನುಂಗಿ ನೀರು ಕುಡಿದರೂ ಎಸ್.ಐ.ಗೆ ಸಮಾಧಾನವಿಲ್ಲ.

ಮೊದಲು ಭಕ್ತನಾಗಿ ಗುಡ್ಡಕ್ಕೆ ದನ ಹೊಯ್ದು ಪೇದೆ ಶಾಸ್ತ್ರಿ ಈಗೀಗ ತಪ್ಪಿಸಹತ್ತಿದ. ಸೆಗಣಿ ಗಂಜಲು ಬಾಚಿ ಹೊರಗೆ ಗುಡ್ಡೆ ಹಾಕುತ್ತಿದ್ದ ಗ್ರೂಪ್ 'ಡಿ' ಇಮಾಮ್‌ಗೆ ಈಗ ಎಸ್.ಐ. ಮಾತಂದ್ರೆ ತಾತ್ಸಾರ. ನೈಟ್ ಡ್ಯೂಟಿ ಮಾಡುವುದೆಂದರೇನೆ ನರಕ ಯಾತನೆ. ಮೂರೂ ಹೊತ್ತೂ ಸೊಳ್ಳೆ ಬತ್ತಿ ಹಚ್ಚಿರಬೇಕು. ಮೂಗಿಗೆ ಮಾಸ್ಕ್. ನಾಲ್ಕಾರು ಸೊಳ್ಳೆ ಬತ್ತಿಯ ಘಾಟಿನಿಂದ ಎಸ್.ಐ.ಗೆ ಅಲರ್ಜಿಯಾಗಿ ಆತಂಗೆ ಸೈನೋಸೈಟಿಸ್ ಉಂಟಾಗಿ ನಿತ್ಯ ನೆಗಡಿ ಆಸಾಮಿಯಾದಾಗ ಆತನ ಬಿಪಿಯೂ ಏರಿ ಪೇದೆಗಳ ಮೇಲೆ ಸವಾರಿ ಮಾಡಲಾರಂಭಿಸಿತು. ಇಡೀ ಠಾಣೆಯಲ್ಲಿ ಅಸಹಿಷ್ಣುತೆ ಒಳಗೇ ಉಂಟಾಗಿ ಸ್ಫೋಟವಾಗುವ ಮುಹೂರ್ತ ನಿಗದಿಯಾಗದೆ ಎಲ್ಲರ ನಡವಳಿಕೆಗಳೂ ಈಗ ಅಡ್ಡಗೋಡೆಯ ಮೇಲಿಟ್ಟ ದೀಪ. ವರ್ಗಾವಣೆಗೆ ಸ್ವಹಃ ಎಸ್.ಐ. ಮಾದೇವಯ್ಯನೇ ಮೊರೆ ಹೋದಾಗ–'ಪೇದೆಗಳ ಪಾಡೇನೋ ಮಾದೇಶ್ವರ' ಅನ್ನುವಂತಾಗಿಬಿಟ್ಟಿತು. ಬರುವ ಗಿಂಬಳವೆಲ್ಲಾ ಹುಲ್ಲುಹೊರೆಗೆ ಅಡ್ಜಸ್ಟ್ ಆಗಿ ಮನೆ ಹೆಂಡ್ತಿ ಕೈಗೆ ಕಾಸು ಬೀಳದಂತಾಗ, 'ಯಾವಳಿಗೆ ಇಕ್ಕುತಾ ಇದೀರ್ರೀ ಗಂಟ್ನೆಲ್ಲಾ ತಗೊಂಡ್ಹೋಗಿ? ತಲೆ ನೆರತ್ರೂ ಚೂಲು ಬಿಡಲಿಲ್ವೆ?' ಎಂದ ಹೆಂಡತಿ ಪ್ರಾಣ ಹಿಂಡ್ತಿಯಾದಳು. ಇಷ್ಟೆಲ್ಲಾ ಪಾಡುಪಡುತ್ತಾ ಮಾನಸಿಕ ರೋಗಿಯಂತಾದ ಎಸ್.ಐ.ಗೆ ಹೆಡ್ ಆಫೀಸ್‌ನಿಂದ ನೋಟೀಸ್ ಬರಬೇಕೆ! 'ಕಾನ್‌ಸ್ಟೇಬಲ್‌ಗಳನ್ನಾ ದನಕಾಯೋಕೆ ಡ್ಯೂಟಿ ಹವರ್ಸ್‌ನಲ್ಲಿ ಹಚ್ಚಿದ್ದಿರಾ ಅಂತ ಹಿಂ.ಜ.ತ. ಸೇನೆಯವರ ಕಂಪ್ಲೇಂಟ್ ಬಂದಿದೆ. ಸರಿಯಾದ ಜವಾಬು ನೀಡದಿದ್ದರೆ ಸೂಟಬಲ್ ಆಕ್ಶನ್ ವಿಲ್ ಬಿ ಟೇಕನ್' ಎಂಬ ಗುಮ್ಮ ಬೇರೆ ಎಸ್.ಐ. ಮೇಲೆ ಎರಗಿತು. ತಿನ್ನುತ್ತಿದ್ದ ಚಿಕನ್ ಬಿರಿಯಾನಿ ಹಳಸಿದ ಚಿತ್ರಾನ್ನದಂತೆ ಭಾಸವಾಯಿತು. ತನ್ನ ಯಾವ ಪಾಪಕ್ಕಾಗಿ ಈ ತೆರನಾದ ಶಿಕ್ಷೆ ಮಾದೇಶ್ವರ ಅಂತ ಮಾದೇವಯ್ಯ ಖಿನ್ನನಾದ. ಗ್ರೂಪ್ 'ಡಿ' ಇಮಾಮ್ ಗಂಜಲ ಎತ್ತದಂತಾದಾಗ ಸಣ್ಣಪುಟ್ಟ ಕಳ್ಳತನ ಮಾಡಿ ಸಿಕ್ಕಿಬಿದ್ದವರಿಂದ ಕೊಟ್ಟಿಗೆ ಕಿಲೀನ್ ಮಾಡಿಸಲಾಯಿತು. ಹಾಗಂತ ಕಳ್ಳರ ಕೈಗೆ ಕೊಟ್ಟು ದನಗಳನ್ನ ಗುಡ್ಡಕ್ಕೆ ಅಟ್ಟಲಾದೀತೆ? ಕೊಟ್ಟಿಗೆಯಲ್ಲೇ ಬಿದ್ದಿದ್ದರೆ ಏಳೆಂಟು ಹೊರೆ ಹುಲ್ಲಾದರೂ ಅವುಗಳ ಹೊಟ್ಟೆಗೆ ಜೋಡಿಸಬೇಕು. ಬಾನಿಗೆ ನೀರು ತುಂಬಲೂ ಪೇದೆಗಳು ಕೈಗೆ ಸಿಗದಂತಾದರು. ಠಾಣೆಯಲ್ಲೀಗ ಅರಾಜಕತೆ. ಎಸ್.ಪಿ. ಸಾಹೇಬರು ಇದ್ದಕ್ಕಿದ್ದಂಗೆ ಫೋನ್ ಮಾಡಿದಾಗ ಎಸ್.ಐ.ನ ತೊಳ್ಳೆಗಳು ನಡುಗಿದವು. 'ಪಶುಸಂಗೋಪನಾ ಇಲಾಖೆಯ ಅಧಿಕಾರಿಯನ್ನಾದ್ರೂ ಕಂಟ್ಯಾಕ್ಟ್ ಮಾಡ್ರಿ. ಅವರು ಗೋಶಾಲೆನಲ್ಲಿ ಜಾನುವಾರುಗಳಿಗೆ ವ್ಯವಸ್ಥಾ ಮಾಡ್ತಾರೆ... ತಲಿಯಾಗೇನು ಸೆಗಣಿ ಇಟ್ಕಂಡೀರೇನು? ಸೀನಿಯರ್ರಾಗಿ ಹಿಂಗ್ ಏನ್ ಡ್ಯೂಟಿ ಮಾಡೋದು? ಇಟ್ ಈಸ್ ಶೇಮ್ ಆನ್ ಯುವರ್ ಪಾರ್ಟ್' ಒಂದೇ ಉಸಿರಿಗೆ ಒದರಾಡಿ ಫೋನ್ ಕುಕ್ಕಿದರು ಎಸ್.ಪಿ. ಮಿನೀಟೂ ವೇಸ್ಟ್